# MAY 05, 2026

# AKASHAVANI - DHARWAD

# PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

‘ಅಸ್ತಮಾ ಬಾಧಿತ ಪ್ರತಿಯೊಬ್ಬರಿಗೂ, ಅಲರ್ಜಿ ನಿವಾರಕ ಔಷಧಗಳ ತುರ್ತು ಪೂರೈಕೆ’ ಎಂಬ, ಧ್ಯೇಯದೊಂದಿಗೆ, ಇಂದು, ವಿಶ್ವ ಅಸ್ತಮಾ ಜಾಗೃತಿ ದಿನಾಚರಣೆ. ಅಸ್ತಮಾ ಕುರಿತ ಭಯವನ್ನು ಹೋಗಲಾಡಿಸಿ, ಜನ ಜಾಗೃತಿ ಮೂಡಿಸುವ, ಹಲವು ಕಾರ್ಯಕ್ರಮಗಳನ್ನು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಜ್ಯಾದ್ಯಂತ ಇಂದು ಆಯೋಜಿಸಿದೆ.

<><><>

ಲ್ಯಾಟ್ರಲ್ ಎಂಟ್ರಿ ಮೂಲಕ, ಇಂಜಿನಿಯರಿಂಗ್ 2ನೇ ವರ್ಷ ಅಥವಾ 3ನೇ ಸೆಮಿಸ್ಟರ್‌ಗೆ ಪ್ರವೇಶಾತಿ ನೀಡುವ, ಡಿ–ಸಿ.ಇ.ಟಿ. ಅರ್ಜಿ ಸಲ್ಲಿಸಿದ, ಡಿಪ್ಲೊಮಾ ವಿದ್ಯಾರ್ಥಿಗಳ, ಮೀಸಲಾತಿ ಸೇರಿದಂತೆ, ಇತರೆ ತಿದ್ದುಪಡಿಗೆ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಈ ತಿಂಗಳ 20ನೇ ತಾರೀಖಿನ ವರೆಗೆ, ಅವಕಾಶ ಕಲ್ಪಿಸಿದೆ. ಇಂದಿನಿಂದಲೇ ಪ್ರವೇಶಾಕಾಂಕ್ಷಿಗಳು, ವೆಬ್‌ಪೋರ್ಟಲ್ ಮೂಲಕ ಲಾಗಿನ್ ಆಗಿ, ತಮ್ಮ ಅರ್ಜಿಯಲ್ಲಿ, ಸೂಕ್ತ ತಿದ್ದುಪಡಿಗಳನ್ನು ಮಾಡಿಕೊಳ್ಳಬಹುದು ಎಂದು, ಪ್ರಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ, ಎಚ್. ಪ್ರಸನ್ನ ತಿಳಿಸಿದ್ದಾರೆ.

<><><>

ಉಡುಪಿ ಜಿಲ್ಲೆಯ, ನಗರ ಹಾಗೂ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ, 2026–27ನೇ ಸಾಲಿನ, ಶೇಕಡ 5ರ ರಿಯಾಯಿತಿ ಆಸ್ತಿ ತೆರಿಗೆ ಪಾವತಿ, ಈ ತಿಂಗಳ 31ರ ವರೆಗೆ ವಿಸ್ತರಿಸಿದ್ದಾಗಿ, ನಗರಸಭೆ ಪೌರಾಯುಕ್ತರು, ಪ್ರಕಟಿಸಿದ್ದಾರೆ.

<><><>

ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳನ್ನು ಬಲಪಡಿಸಿ, ಅಭಿವೃದ್ಧಿಯತ್ತ ಕೊಂಡೊಯ್ಯುವಲ್ಲಿ, ಜನ ಸಮುದಾಯಗಳ ಸಹಭಾಗಿತ್ವ, ಮುಖ್ಯ ಎಂದು, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ, ಎನ್.ಎಸ್. ಬೋಸರಾಜು ಹೇಳಿದ್ದಾರೆ. ಕೊಡಗು ಜಿಲ್ಲೆ, ಮಡಿಕೇರಿಯಲ್ಲಿ, ಸ್ಥಳೀಯ ಸಂಸ್ಥೆಗಳ ಬಲವರ್ಧನೆ ಮತ್ತು ಜನರ ಪಾಲ್ಗೊಳ್ಳುವಿಕೆ ಕುರಿತ ಸಭೆಯಲ್ಲಿ, ಅವರು ಮಾತನಾಡಿದರು.  ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ, ಡಿ.ಆರ್.ಪಾಟೀಲ ಸಭೆಯಲ್ಲಿ, ಪಾಲ್ಗೊಂಡಿದ್ದರು.

<><><>

ಶಿವಮೊಗ್ಗ ಜಿಲ್ಲೆ, ಸಾಗರ ತಾಲೂಕು, ದೇಸೂರು ಸೇರಿದಂತೆ, ಪಶ್ಚಿಮಘಟ್ಟ ಪ್ರದೇಶದ, ಉತ್ತರಕನ್ನಡ ಜಿಲ್ಲೆಯ ಯಾವ ಭಾಗದಲ್ಲಿಯೂ, ಬೃಹತ್ ಅಭಿವೃದ್ಧಿ ಯೋಜನೆಗಳನ್ನು ಆರಂಭಿಸಲು, ಅಲ್ಲಿನ ಧಾರಣಾಶಕ್ತಿ ದುರ್ಬಲವಾಗಿದೆ ಎಂದು, ಭಾರತೀಯ ವಿಜ್ಞಾನ ಸಂಸ್ಥೆಯ, ಹಿರಿಯ ವಿಜ್ಞಾನಿ, ಪ್ರೊಫೆಸರ್ ಟಿ.ವಿ. ರಾಮಚಂದ್ರ ಹಾಗೂ ವೃಕ್ಷ ಲಕ್ಷ ಆಂದೋಲನ, ಕರ್ನಾಟಕದ ಅಧ್ಯಕ್ಷ, ಅನಂತ ಹೆಗಡೆ ಅಶೀಸರ ಸೇರಿದಂತೆ, ಹಲವು ಪರಿಸರಾಸಕ್ತರು, ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ, ಆಗ್ರಹ ಪತ್ರ ಸಲ್ಲಿಸಿದ್ದಾರೆ. ಈ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಸಾಗರದ ಕವಲಕೋಡು ವೆಂಕಟೇಶ.

<><><>

ಕವಲಕೋಡು ವೆಂಕಟೇಶ ಧ್ವನಿ 45 ಸೆಕೆಂಡುಗಳು

<><><>

ಬೀದರ ಜಿಲ್ಲೆ, ಔರಾದ್ ತಾಲೂಕಿನ 14 ಗ್ರಾಮಗಳು, ಕಮಲನಗರದ 11, ಬಸವಕಲ್ಯಾಣದ 10 ಹಾಗೂ ಭಾಲ್ಕಿಯ 8 ಗ್ರಾಮಗಳು ಸೇರಿ, ಒಟ್ಟು 43 ಗ್ರಾಮಗಳಲ್ಲಿ, ಸದ್ಯಕ್ಕೆ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದೆ. ಈ ತಿಂಗಳಾಂತ್ಯಕ್ಕೆ, ಸಮಸ್ಯೆ ತೀವ್ರಗೊಳ್ಳುವ ಸಾಧ್ಯತೆ ಇದೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಮಾಹಿತಿ ನೀಡಿ, ಔರಾದ್‌ನ ತಾಂಡಾಗಳಲ್ಲಿ, ನೀರಿನ ಸಮಸ್ಯೆ ಉಲ್ಬಣಿಸಿದೆ. ಅಂತರ್ಜಲ ಮಟ್ಟ 700 ರಿಂದ 800 ಅಡಿ ವರೆಗೆ ಕುಸಿದಿದೆ. ಅಧಿಕಾರಿಗಳಿಗೆ, ಕೊಳವೆ ಬಾವಿ ಪುನಃಶ್ಚೇತನ, ಫ್ಲಶಿಂಗ್ ಹಾಗೂ ಡೀಪನಿಂಗ್ ಕಾರ್ಯಕೈಗೊಳ್ಳಲು, ಸೂಚಿಸಿದ್ದಾಗಿ ತಿಳಿಸಿದರು.

<><><>

ಬೀದರ ಜಿಲ್ಲೆ, ಬಸವಕಲ್ಯಾಣದ ಅನುಭವ ಮಂಟಪದಲ್ಲಿ, ನೂತನವಾಗಿ ನಿರ್ಮಾಣಗೊಂಡ, ವಿಶ್ವದ ಅತೀ ಎತ್ತರದ, 55 ಮೀಟರ್ ಇಷ್ಟಲಿಂಗಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ, ಪೂಜೆ ಸಲ್ಲಿಸಿ, ಅನುಭವ ಮಂಟಪದ ಕಾಮಗಾರಿ ಪರಿಶೀಲಿಸಿದರು.

<><><>

ಬೆಳಗಾವಿ ಜಿಲ್ಲೆ, ಐತಿಹಾಸಿಕ ಕಿತ್ತೂರು ಹಾಗೂ ಕಿತ್ತೂರು ರಾಜ ಮನೆತನದ ಬಗ್ಗೆ, ಮಹತ್ವದ ಸಂಶೋಧನೆಗಳು ನಡೆಯಬೇಕಿದೆ ಎಂದು, ಗೋವಾ ರಾಜ್ಯದ, ಪಣಜಿ ಇಂಡೋ–ಪೋರ್ಚುಗೀಸ್ ಸಾಹಿತ್ಯ ಪ್ರತಿಷ್ಠಾನದ ನಿರ್ದೇಶಕ, ಡಾಕ್ಟರ್ ಅರವಿಂದ ಯಾಳಗಿ, ಹೇಳಿದ್ದಾರೆ. ಧಾರವಾಡ, ಕರ್ನಾಟಕ ವಿದ್ಯಾವರ್ಧಕ ಸಂಘದ, ರಾ.ಹ.ದೇಶಪಾಂಡೆ ಸಭಾಂಗಣದಲ್ಲಿ, ಕಿತ್ತೂರು ಸಂಸ್ಥಾನದ ವಂಶಜರು ಆಯೋಜಿಸಿದ, '1824ರ ನಂತರ, ಕಿತ್ತೂರು ಸಂಸ್ಥಾನದ ಹೊಸ ಸಂಶೋಧನೆಗಳು ಹಾಗೂ ವಂಶಜರು' ಕುರಿತ, ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು.

<><><>

ವಿಶ್ವ ವಿಖ್ಯಾತ, ಮೈಸೂರು ದಸರಾ ಮಹೋತ್ಸವದಲ್ಲಿ, ಒಟ್ಟು 8 ಬಾರಿ ಚಿನ್ನದ ಅಂಬಾರಿ ಹೊತ್ತ, ಅರ್ಜುನ ಆನೆಯ ಸ್ಮಾರಕ, ಆನೆ ಮಡಿದ ಸ್ಥಳ, ಹಾಸನ ಜಿಲ್ಲೆ, ಸಕಲೇಶಪುರ ತಾಲೂಕು, ಯಳಸೂರಿನಲ್ಲಿ ನಾಳೆ ಅನಾವರಣಗೊಳ್ಳಲಿದೆ.

<><><>

ಖ್ಯಾತ ಲೇಖಕ, ಜಿ.ಎಸ್. ಜಯದೇವ ಸಾರಥ್ಯದ, ಚಾಮರಾಜನಗರದ, ದೀನಬಂಧು ಸಂಸ್ಥೆ, ಶಾಲೆ ಹಾಗೂ ವಿಜ್ಞಾನವನಕ್ಕೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಡಾಕ್ಟರ್ ಪುರುಷೋತ್ತಮ ಬಿಳಿಮಲೆ, ನಾಳೆ ಭೇಟಿ ನೀಡಲಿದ್ದಾರೆ. ಬಳಿಕ ವಿಶೇಷ ಸಭೆ ನಡೆಯಲಿದ್ದು, ಕನ್ನಡ ಮಾಧ್ಯಮ ಶಾಲೆಗಳ ಕುರಿತು, ಅವರು ವರದಿ ಬಿಡುಗಡೆ ಮಾಡಲಿದ್ದಾರೆ.

<><><>

ರಾಜಧಾನಿ ಬೆಂಗಳೂರು ಸೇರಿ, ದಕ್ಷಿಣ ಒಳನಾಡಿನ ವಿವಿಧೆಡೆ, ಮುಂದಿನ ಐದು ದಿನಗಳ ವರೆಗೆ, ಗುಡುಗು, ಮಿಂಚು ಮತ್ತು ಬಿರುಗಾಳಿ ಸಹಿತ, ಮಳೆಯಾಗಲಿದೆ. ಹವಾಮಾನ ಇಲಾಖೆ ಮುನ್ಸೂಚನೆಯಂತೆ, ನಾಳೆ ಮತ್ತು ನಾಡಿದ್ದು, ಚಾಮರಾಜನಗರ, ಮೈಸೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ, ಮಳೆಯಾಗುವ ಸಾಧ್ಯತೆ ಇದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.